ತರುತ್ತೇನೆಂದು ಕೇಜಿಯಣ್ಣ ಜೀಪಿನೆಡೆಗೆ ಹೋದ. ಜೀಪು ಹೊರಟ ಮೇಲೆ ಮತ್ತದೇ ದೂಳಿನ ಹಾದಿ, ಲಲಿತೆಯ ಹೊರತಾಗಿ ಉಳಿದವರಿಗೆ ಬಾಯಿ ಬಿಡಲಾಗದು.

ವಸ್ತ್ರ ಬದಲಿಸಿ ಬರುವಷ್ಟರಲ್ಲಿ ಒಂದಿಷ್ಟು ತಿನಿಸುಗಳೊಂದಿಗೆ ಕೇಜಿಯಣ್ಣ ಕಾಯುತ್ತಿದ್ದ, ಬಾಡಿದ ಮುಖದಲ್ಲಿ. 'ಜೀಪಿನ ಹಿಂದಿನ ಟಯರ್ರಿನ ಹವಾ ಹೋದಂಗಿದ್ದು. ಬಂಕಿಕೊಡ್ಲಿನ ಹಾದಿಯಲ್ಲೆಲ್ಲಾ ಈ ಟಯರಲ್ಲಿ ಹೋಪಲ್ಲಾಗ್ತಿಲ್ಲೆ. ಸಮೀಪದ ಜಡ್ಡೀಗದ್ದೆಲಿ ಇದನ್ ಸರಿ ಮಾಡವ್ವು ಯಾರಿಲ್ಲೆ. ಹುಲೇಕಲ್ಲಿಗೇ ಹೋಗಕ್ಕಾಗ್ತು. ಬಪ್ಪದು ಮಧ್ಯಾಹ್ನ ಆಗ್ತೇನ' ಎಂದ ನಿರಾಸೆಯ ಧ್ವನಿಯಲ್ಲಿ. ಥತ್! ಇವತ್ತೇ ಹೀಗಾಗಬೇಕೆ! ಎಲ್ಲರೂ ಹಿಂದಿರುಗುವುದು ಅನಿವಾರ್ಯ. ಆದರೆ ನನಗೆ ಮನಸ್ಸಿರಲಿಲ್ಲ. ಇಲ್ಲಿಂದ ಮೂರು ಕಿ.ಮೀ. ಹಾದಿಯಷ್ಟೆ ಕೇಜಿಯಣ್ಣನ ಮನೆ. ನಾವಿಬ್ಬರು ನಡೆದೇ ಹೋಗೋಣವೇ ಎಂದು ಲಲಿತೆಯನ್ನು ಕೇಳಿದೆ. ಮರುಕ್ಷಣಕ್ಕೆ ಹೂಂಗುಟ್ಟಿದಳು. ಮಗಳನ್ನು ಮನೆಗೆ ಬಿಟ್ಟು ಮುಂದೆ ಹೋಗುವುದಾಗಿ ಹೇಳಿ ಕೇಜಿಯಣ್ಣ ಜೀಪು ತಿರುಗಿಸಿದ.

ಉಳಿದಿದ್ದು ನಾನು, ಲಲಿತೆ. ಬಂಕಿಕೊಡ್ಲಿಗೆ ಹೋಗುವ ಪ್ಲಾನು ಮಗುಚಿದ್ದಕ್ಕೆ ಇಬ್ಬರಿಗೂ ನಿರಾಸೆಯಾಗಿತ್ತು. ಸುಮ್ಮನೆ ಹೊಳೆಕಲ್ಲಿನ ಮೇಲೆ ಕುಳಿತು ನೀರಿಗೆ ಕಲ್ಲೆಸೆಯುತ್ತಿದ್ದೆವು. ಫಕ್ಕನೆ ಏನೋ ಹೊಳೆದಂತಾಯ್ತು. 'ಲಲ್ತ, ಅಕ್ತಂಗಿ ಗುಂಡಿ ಎತ್ಲಬದೀಗೆ ಅಂದೆ?' ಕೇಳಿದೆ ಅನುಮಾನದಲ್ಲಿ. ಒಂದು ದಿಕ್ಕಿಗೆ ಕೈ ತೋರಿದಳು. 'ಹೋಗುವಾ?' ಧ್ವನಿ ಅನುಮಾನದಲ್ಲೇ ಹೊರಗೆ ಬಂದಿತ್ತು ನನ್ನದು. 'ಬನ್ನಿ, ಹೋಗುವ' ಎನ್ನುತ್ತಾ ಸರಕ್ಕನೆದ್ದು ನಿಂತಳು. ನನ್ನ ಗೊಂದಲ ಹೆಚ್ಚಾಯ್ತು. ವಿಷಯ ಇವಳ ಮನೆಯವರಿಗೆ ತಿಳಿದರೆ? ತಿಳಿದು ರಂಪವಾದರೆ? ಬೊಮ್ಮಜ್ಜನಿಗೆ ಗೊತ್ತಾದರೆ? 'ಯಾರಿಗೂ ಗೊತ್ತಾಗೂದಿಲ್ಲ. ನೀವ್ ಬನ್ನಿ ಅಕ್ಕ' ಎನ್ನುತ್ತಾ ಮೊದಲು ಕೈತೋರಿದ ದಿಕ್ಕಿನೆಡೆಗೆ ನಡೆಯತೊಡಗಿದಳು. ಢವಗುಟ್ಟುವ ಎದೆಯೊಂದಿಗೆ ಅವಳನ್ನು ಹಿಂಬಾಲಿಸಿದೆ.

ತೀರಾ ನಿಧಾನವಾಗಿ ಹರಿಯುತ್ತಿತ್ತು ಹೊಳೆ ಇಲ್ಲಿ. ಮೊದಲೇ ಹೇಳಿದಂತೆ ಮಡುವಿನಂಥ ಜಾಗ. ಸುತ್ತಲೂ ದಟ್ಟ ಕಾನು. ಈ ಬೇಸಿಗೆಯಲ್ಲೂ ಬಿಸಿಲಿನ ಝಳ ತಾಗದೆ, ದಂಡೆಯ ಕಲ್ಲುಗಳು ತಂಪಾಗಿದ್ದವು. ಪುಟ್ಟ ನಡುಗಡ್ಡೆಯಂಥ ಹತ್ತಾರು ಮರಗಳ ಭೂಮಿಯಿಂದಾಗಿ ಹೊಳೆ ಸ್ವಲ್ಪ ಹಿಂದೆಯೇ ಕವಲಾಗಿದ್ದು, ಈ ಜಾಗದಲ್ಲಿ ಕೂಡಿಕೊಂಡಿದ್ದರಿಂದ ಇಲ್ಲಿ ಸ್ವಲ್ಪ ಅಗಲವಾಗಿತ್ತು. ಯಾವುದೋ ಪೋಸ್ಟರ್‌ನಲ್ಲಿ ಕಂಡಷ್ಟೇ ಸುಂದರ ತಾಣ. ದೇವತೆಗಳು ಧರೆಗಿಳಿದು ಮೀಯಲು ಪ್ರಶಸ್ತವಾಗಿದೆ ಎನಿಸಿತು. ಆದರೆ ಲಲಿತೆಯ ಚರ್ಯೆ ನಿಜಕ್ಕೂ ಅಚ್ಚರಿ ಹುಟ್ಟಿಸಿತು. ತಮಗೆ ಕಾಲಿಡಲು ನಿಷಿದ್ಧ ಎಂಬಂಥ ಜಾಗಕ್ಕೆ ಬಂದ ಕಿಂಚಿತ್ ಕಳವಳವೂ ಅವಳಲ್ಲಿ ಕಾಣಲಿಲ್ಲ. ತೀರಾ ಗೊತ್ತಿದ್ದ ಸ್ಥಳದಂತೆ ನನಗದರ ಪರಿಚಯ ಮಾಡಿಕೊಡುತ್ತಿದ್ದಳು.

'ನಿಜಕ್ಕೂ ಇದೇ ಹೌದನೆ ಅಕ್ತಂಗಿ ಗುಂಡಿ? ಅಥ್ವ ಸುಳ್ಳೇ ಯಾವ್ದೋ ಜಾಗಕ್ಕೆ ಕರ್ಕಂಡ್ ಬಂದ್ಯಾ?' ಅನುಮಾನದಿಂದಲೇ ಕೇಳಿದೆ.

'ಅಯ್ಯ, ಹತ್ನೇತಿ ಪರೀಕ್ಷೆಗೆ ನಾ ಓದಿದ್ದು ಪೂರಾ ಇಲ್ಲೇಯ. ಮನೆಲ್ಲಿ ಕುಂತ್ರೆ ಓದೂಕಾಗ್ತಿತ್ತಾ' ಎಂದಳು ನಗುತ್ತಾ.

'ಹಂಗಾದರೆ ಇಲ್ಲೆಲ್ಲಾ ಬರ್ತಿದ್ರನೇ?' ನನ್ನ ಅನುಮಾನವಿನ್ನೂ ಪರಿಹಾರ ಆಗಿರಲಿಲ್ಲ.

'ಬರದೇ ಎಂತ! ಅಕ್ತಂಗೀರು ಹೆಂಗಸ್ರ ಸುದ್ದೀಗೆ ಬರೂದಿಲ್ಲ. ಅದೆಲ್ಲಾ ಗಂಡಸ್ರಿಗೆ' ಎಂದು ಕಣ್ಣು ಮಿಟುಕಿಸಿದಳು. ಎಲಾ ಇವಳಾ! ನಾ ಅಂದುಕೊಂಡಿದ್ದಕ್ಕಿಂತ ಜೋರಿದ್ದಾಳೆ. ಈ ಪೋರಿಯ ಮನದಲ್ಲಿ ಏನಿದೆ ಎನ್ನುವುದೇ ಅರ್ಥವಾಗಲಿಲ್ಲ.

'ನೀ ಬರೂದು ನಿನ್ನಬ್ಬೆಗೆ ಗೊತ್ತಾದ್ರೆ?' ನನ್ನ ಅನುಮಾನವೀಗ ಕುತೂಹಲಕ್ಕೆ ತಿರುಗಿತ್ತು.

'ನಂಗೀ ಜಾಗ ತೋರ್ಸಿ ಕೊಟ್ಟಿದ್ದೇ ನನ್ನಬ್ಬೆ' ಎಂದಳು ಅಗ್ದಿ ಸಹಜ ಎನ್ನುವಂತೆ. ಇದೇನು ವಿಚಿತ್ರ! ಗೊಂದಲದ ಭಾರಕ್ಕೆ ಸುಮ್ಮನೆ ಕಲ್ಲಿನ ಮೇಲೆ ಕುಳಿತೆ. 'ಅಜ್ಜಯ್ಯ ಅಷ್ಟೆಲ್ಲಾ ಗಲಾಟೆ ಮಾಡಿದ್ದ ಇಲ್ಲಿ ಬರೂಕೆ. ಈಗ ನಾ ಹೀಂಗಂದೆ ಹೇಳಿ ಯೋಚ್ನೆ ಮಾಡೀರಿ ಅಲ್ಲಾ' ಲಲಿತೆಯೇ ಕೇಳಿದಾಗ ಸುಮ್ಮನೆ ತಲೆಯಾಡಿಸಿದೆ. ಏನು ಕೇಳಬೇಕು, ಹೇಗೆ ಕೇಳಬೇಕು ಒಂದೂ ತಿಳಿಯದಷ್ಟು ಪ್ರಶ್ನೆಗಳಿದ್ದವು ಮನದಲ್ಲಿ.

'ಅಕ್ಕಾ, ನಿಮ್ಗೇನೊ ಹೇಳ್ತೆ. ಆದ್ರೆ ಯಾರ್ ಕೂಡೂ ನೀವ್ ಹೇಳೂಕಾಗ. ಭೂಮಿ ಮುಟ್ ಆಣೆ ಮಾಡಿ' ಎಂದಳು. ನೆಲದ ಮೇಲೆ ಕೈಯಿಟ್ಟೆ.